

## ಆನ್‌ಲೈನ್ ರೇಡಿಯೊ ಕೇಂದ್ರಗಳು

ಸಂಗೀತ ಪ್ರಸಾರ ಮಾಡುವಲ್ಲಿ ಆಕಾಶವಾಣಿ ಪಾತ್ರ ಅಪಾರ. ಐವತ್ತರ ದಶಕದಲ್ಲೇ ಜನಪ್ರಿಯವಾದ ಆಕಾಶವಾಣಿ ಸಂಗೀತ ಕಾರ್ಯಕ್ರಮಗಳು ಆನ್‌ಲೈನ್ ಸಂಗೀತ ಕಛೇರಿಗಳಿಗೆ ಪ್ರೇರಣೆಯಾಗಿವೆ ಎಂದರೂ ತಪ್ಪಿಲ್ಲ. ಆಕಾಶವಾಣಿಯ ರಾಷ್ಟ್ರೀಯ ಸಂಗೀತೋತ್ಸವಗಳು ಸಂಗೀತಗಾರರನ್ನು ಬೆಳೆಸಲು, ಕಲೆಯ ಅನಾವರಣಕ್ಕೆ ಬಹಳಷ್ಟು ಸಹಕಾರಿಯಾಗಿವೆ. ಎಎಮ್, ಎಫ್‌ಎಮ್ ಮತ್ತು ಆನ್‌ಲೈನ್ ರೇಡಿಯೊ ಕೇಂದ್ರಗಳು ಕೇಳಲು ಅತ್ಯಂತ ಸರಳವಾದ ರೀತಿಯಲ್ಲಿ ಇಂದು ಸ್ವರಸಂಯೋಜನೆಯಲ್ಲಿ ಕೇಳುಗರಿಗೆ ಒದಗಿಸುತ್ತಿವೆ. ವಿಶ್ವದಾದ್ಯಂತ ಇಂದು ಸುಮಾರು 40 ಸಾವಿರ ರೇಡಿಯೊ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.

> ಆನ್‌ಲೈನ್ ಸಂಗೀತ ಕಛೇರಿಗಳಲ್ಲಿ ಪ್ರೇಕ್ಷಕ–ಕಲಾವಿದರ ನಡುವಿನ ಸಂವಹನ, ಸಂವಾದದ ಚಾರ್ಮ್ ಮಿಸ್ ಆಗುತ್ತೆ. ಸಾವಿರಾರು ಕೇಳುಗರು ಎದುರುಗಡೆ ತನ್ಮಯರಾಗಿ ಕುಳಿತು ತಾಳ ಹಾಕೊಂಡು ‘ಆಹಾ, ವಾವ್!..’ ಎಂದು ಖುಷಿಯಿಂದ ಉದ್ಗರಿಸುವಾಗ ಆಗುವ ಸಂತೋಷ ಇಲ್ಲಿ ಗೌಣ
>
> -ಮೈಸೂರು ಮಂಜುನಾಥ್

ಲೈವ್ ಕಛೇರಿ ಕೇಳುಗರಿಗೆ ಬೇಕಾಗುತ್ತೆ ಅಂತ ಕೇಳಿ ನನ್ನಿಂದ ರೆಕಾರ್ಡ್ ಮಾಡಿಸಿಕೊಂಡಿದೆ. ಕಛೇರಿ ಜೊತೆಗೆ ಸಂಗೀತದ ಬಗ್ಗೆ, ಭಾರತೀಯ ಸಂಗೀತದ ಬಗ್ಗೆ ಮಾತನಾಡಬೇಕು ಎಂದೂ ಕೇಳಿ ರೆಕಾರ್ಡ್ ಮಾಡಿದೆ. ಸಂಗೀತವನ್ನು ಟೀವಿ, ರೇಡಿಯೊಗಳು ಲಕ್ಷಾಂತರ ಮಂದಿಗೆ ತಲುಪಿಸುತ್ತವೆ ಎಂದಾದರೆ ಅದು ನಮಗೆ ಸಂತೋಷದ ಸಮಾಚಾರವೇ’ ಎಂದು ಸಂಗೀತ ಕ್ಷೇತ್ರದ ಹೊಸ ಸಾಧ್ಯತೆಯ ಬಗ್ಗೆ ಮೈಸೂರು ಮಂಜುನಾಥ್ ಹೇಳುತ್ತಾರೆ.

### ಬಹಳಷ್ಟು ಜನರನ್ನು ತಲುಪುತ್ತೆ...

ಕರ್ನಾಟಕ ಶಾಸ್ತ್ರೀಯ ಸಂಗೀತದ ಕೊಳಲು ವಾದನದಲ್ಲಿ ವಿಶ್ವವಿಖ್ಯಾತರಾಗಿರುವ ಶಶಾಂಕ್ ಸುಬ್ರಹ್ಮಣ್ಯಮ್ ಆನ್‌ಲೈನ್‌ನಲ್ಲಿ ಕೊಳಲು ಕಛೇರಿ ನೀಡಿ ಸಹೃದಯರನ್ನು ರಂಜಿಸಿರುವ ಗಣ್ಯ ಕಲಾವಿದರಲ್ಲೊಬ್ಬರು.

‘ಯಾವ ಕಲಾವಿದರು ಬೇಕಾದರೂ ಆನ್‌ಲೈನ್‌ನಲ್ಲಿ ಹಾಡಬಹುದು, ನುಡಿಸಬಹುದು. ಫೇಸ್‌ಬುಕ್, ಇನ್‌ಸ್ಟಾಗ್ರಾಮ್, ಟ್ವಿಟರ್, ಯೂಟ್ಯೂಬ್ ಮುಂತಾದ ಜಾಲತಾಣಗಳಲ್ಲಿ ಅವಕಾಶಗಳಿವೆ. ಕೆಲವು ಖ್ಯಾತ ಸಂಘಟನೆಗಳು ‘ಫ್ಯಾನ್ ಕ್ಲಬ್’ ಬೆಳೆಸಿಕೊಂಡಿದ್ದು, ಇವರೇ ಕಲಾವಿದರನ್ನು ಆನ್‌ಲೈನ್ ಕಛೇರಿ ನೀಡುವಂತೆ ಆಹ್ವಾನಿಸುತ್ತವೆ. ಇದು ಹೆಚ್ಚು ಕೇಳುಗರನ್ನು ತಲುಪುತ್ತೆ. ಕಲಾವಿದರು ಇನ್ನೂ ಬೆಳೆಯಬಹುದು. ಆದರೆ ಸಂಪಾದನೆ ಮಾತ್ರ ಗೌಣ’ ಎಂದು ಹೇಳುತ್ತಾರೆ ಶಶಾಂಕ್.

‘ಮುಂಬಯಿಯಲ್ಲಿ ದುರ್ಗಾ ಜಸರಾಜ್ ನಡೆಸುವ ‘ಆರ್ಟ್ ಆಂಡ್ ಆರ್ಟಿಸ್ಟ್ ಕ್ಲಬ್’ ಮುಖಾಂತರ ಕೊಳಲು ಕಛೇರಿ ನೀಡಿದ್ದು ಒಂದು ಲಕ್ಷಕ್ಕೂ ಹೆಚ್ಚು ಸದಸ್ಯರನ್ನು ತಲುಪಿದೆ’ ಎನ್ನುತ್ತಾರೆ ಅವರು.

‘ಸಂಗೀತ ಕಛೇರಿಗಳಲ್ಲಿ ಪಕ್ಕವಾದ್ಯಗಾರರ ಸಹಕಾರ ಬಹಳ ಮುಖ್ಯ. ಇದನ್ನು ಹೇಗೆ ಹೊಂದಾಣಿಕೆ ಮಾಡಿಕೊಳ್ಳುತ್ತೀರಿ ಎಂಬ ಪ್ರಶ್ನೆಗೆ – ‘ಆನ್‌ಲೈನ್‌ನಲ್ಲಿ ಪ್ರಿರೆಕಾರ್ಡೆಡ್ ಸಹಕಲಾವಿದರು ಇರುತ್ತಾರೆ. ಅವರನ್ನು ಬಳಸಿಕೊಳ್ಳಬಹುದು. ಇದೇ ವಿಧಾನದಲ್ಲಿ ಹಲವಾರು ಕಛೇರಿ, ಪ್ರಾತ್ಯಕ್ಷಿಕೆ ನೀಡಿದ್ದೇನೆ’ ಎಂದು ವಿವರಿಸುತ್ತಾರೆ ಶಶಾಂಕ್.



ಡಾ. ಉದಯರಾಜ್ ಕರ್ಪೂರ

### ಆನ್‌ಲೈನ್‌ನಲ್ಲೇ ತಬಲಾ ಬೋಲ್ಸ್!

ಪಂ. ಉದಯರಾಜ್ ಕರ್ಪೂರ್ ಗುರುಕುಲ ಪದ್ಧತಿಯಲ್ಲಿ ತಬಲಾ ಅಭ್ಯಾಸ ಮಾಡಿದವರು. ಹಿರಿಯ ವಿದ್ವಾಂಸರಾದ ಪಂ. ರವೀಂದ್ರ ಯಾವಗಲ್ ಅವರಲ್ಲಿ ಕಲಿತಿರುವ ಉದಯರಾಜ್ ಪ್ರಸ್ತುತ ತಬಲಾದಲ್ಲಿ ಮುಂಚೂಣಿಯಲ್ಲಿರುವ ಕಲಾವಿದರು. ಆನ್‌ಲೈನ್ ಕಲಿಕೆ ಬಗ್ಗೆ ಹೆಚ್ಚಿನ ಒಲವು ವ್ಯಕ್ತಪಡಿಸದ ಅವರು, ಅನಿವಾರ್ಯವಾಗಿ ಈಗ ತಬಲಾ ಕ್ಲಾಸ್ ಮಾಡುತ್ತಿದ್ದಾರೆ.

‘ತಬಲಾ ಎಂಬ ಲಯವಾದ್ಯ ಕಲಿಸುವುದು ಆನ್‌ಲೈನ್‌ನಲ್ಲಿ ಕೊಂಚ ತ್ರಾಸದಾಯಕವೇ’ ಎನ್ನುವ ಉದಯರಾಜ್, ‘ನಾನು ಅನಿವಾರ್ಯವಾಗಿ ಇಬ್ಬರಿಗೆ ಕ್ಲಾಸ್ ಶುರು ಮಾಡಿದೆ. ವಾಟ್ಸ್‌ಆ್ಯಪ್ ಕಾಲ್‌ನಲ್ಲಿ ಪಾಠ ಮಾಡುವಾಗ ಶಿಷ್ಯರೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವುದು ಕಷ್ಟ. ಒಂದೇ